

# ಬಸ್ಟರ್ಡ್ ಪಕ್ಷಿ ಸಂಕುಲದ ಪುನರುತ್ಥಾನ



■ ಪವನಕುಮಾರ್ ಎಚ್.

ಭಾರತ–ಪಾಕಿಸ್ತಾನ ಗಡಿಯಲ್ಲಿ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಸ್ಥಗಿತವಾಗಿ ಹಲವು ತಿಂಗಳಾದವು. ಆದರೆ ಪಾಕಿಸ್ತಾನ ಗಡಿಯಿಂದ 200 ಕಿ.ಮೀ. ದೂರದ ರಾಜಸ್ಥಾನದ 'ರಾಮದೇವ್ರಾ ಸಂರಕ್ಷಣಾ ಕೇಂದ್ರ'ದಲ್ಲಿ ಪಶುವಿಜ್ಞಾನಿ ತುಷ್ನಾ ಕರ್ಕರಿಯಾ ಯುದ್ಧದ ದಿನ ಅನುಭವಿಸಿದ ಸಂಕಷ್ಟವನ್ನು ಇನ್ನೂ ಮರೆತಿಲ್ಲ! ಯುದ್ಧದ ದಿನಗಳು ಅವರಿಗೆ ಕರಾಳವಾಗುವುದಕ್ಕೆ ವೈಯಕ್ತಿಕ ಸುರಕ್ಷೆ ಕಾರಣವಾಗಿರಲಿಲ್ಲ. 2019ರಿಂದ ಕಾಳಜಿಯಿಂದ ಸಲುಹಿದ 'ಗ್ರೇಟ್ ಇಂಡಿಯನ್ ಬಸ್ಟರ್ಡ್ (ಗಿಬ್)' ಪಕ್ಷಿಯ 69 ಸಾಕುಮರಿಗಳನ್ನು ಕಾಪಾಡುವುದು ದೊಡ್ಡ ಸವಾಲಾಗಿತ್ತು. 'ರಾಮದೇವ್ರಾ ಸಂರಕ್ಷಣಾ ಕೇಂದ್ರದ ಬಳಿ ಒಂದೇ ಕ್ಷಿಪಣಿ ಬಿದ್ದರೂ ಸಾಕಿತ್ತು; ಹಲವು ವರ್ಷಗಳಿಂದ ಸಂರಕ್ಷಿಸಿದ ಶ್ರಮವೆಲ್ಲ ಮಾಯವಾಗಿ ಹೋಗುತ್ತದೆ' ಎನ್ನುವ ಆತಂಕ ಮನೆ ಮಾಡಿತ್ತು.

''ಯುದ್ಧದ ಸನ್ನಿವೇಶ ಎದುರಾದ ಸಂದರ್ಭ, 9 ಮರಿಗಳನ್ನು 450 ಕಿ.ಮೀ. ದೂರದ 'ಆರ್ವಾರ್' ಪ್ರದೇಶಕ್ಕೆ ಸ್ಥಳಾಂತರಿಸಿ ಕನಿಷ್ಠ ಒಂದು ಸಂತತಿಯನ್ನಾದರೂ ಸಂರಕ್ಷಿಸಿಕೊಳ್ಳಬಹುದು ಎಂದು ರಾಜಸ್ಥಾನದ 'ಗ್ರೇಟ್ ಇಂಡಿಯನ್ ಬಸ್ಟರ್ಡ್' ಪಕ್ಷಿ ಸಂರಕ್ಷಣೆ ತಂಡ ಹಾಗೂ ಭಾರತೀಯ ವನ್ಯಜೀವಿ ಸಂಸ್ಥೆ (ಡಬ್ಲು.ಐಐ)ಯಿಂದ ಯೋಜನೆ ರೂಪಿಸಲಾಯಿತು'' ಎಂದು ತುಷ್ನಾ ವಿವರಿಸಿದರು.

ದೊಡ್ಡ ಪಕ್ಷಿಗಳ ಪಾಲನೆಗೆ ಕೆಲವು ಸಿಬ್ಬಂದಿ ರಾಮದೇವ್ರಾದಲ್ಲೇ ಉಳಿದುಕೊಂಡು, ಇನ್ನುಳಿದ ಸಿಬ್ಬಂದಿ ಮರಿಗಳ ಪಾಲನೆಗಾಗಿ ಆರ್ವಾರ್‌ಗೆ ತೆರಳಿದ್ದರು. ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಡೆದ ಸಂದರ್ಭ ಜನ್ಮತಾಳಿದ ಮೂರು ಹಕ್ಕಿಮರಿಗಳಿಗೆ ಸೋಫಿಯಾ ಖುರೇಷಿ, ವ್ಯೋಮಿಕಾ ಸಿಂಗ್ ಹಾಗೂ ವಿಕ್ರಮ ಮಿಶ್ರಿ ಅವರ ಹೆಸರನ್ನೇ ನಾಮಕರಣ ಮಾಡಿದ್ದು ವಿಶೇಷ.